ಅಧ್ಯಕ್ಷರು :- ಮಾನ್ಯ ಚೆನ್ನಿಗಪ್ಪನವರೆ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :- ಮಾನ್ಯ ಅಧ್ಯಕ್ಷರೆ, ಇಲ್ಲಿ ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು :- ತಮ್ಮ ಪ್ರಶ್ನೆ ಸಂಖ್ಯೆ : 89 : 642ನ್ನು ಎನರ್ಜಿ ಇಲಾಖೆಗೆ ವರ್ಗಾಯಿಸಲಾಗಿದೆ. ಉತ್ತರ ಬರುತ್ತದೆ. ಇನ್ನೂ ನಾವು ಮೂರು ವಾರಗಳ ಕಾಲ ಅಧಿವೇಶನವನ್ನು ನಡೆಸುತ್ತೇವೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :- ಮಾನ್ಯ ಮಂತ್ರಿಗಳಿಂದ ಎರಡು ಪತ್ರಗಳು ಬಂದಿದ್ದರೂ ಕೂಡ ಆ ಅಧಿಕಾರಿಗಳು ಉಲ್ಲಂಘನೆಯನ್ನು ಮಾಡುತ್ತಿದ್ದಾರೆ. ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ಅವರೇ ಸ್ವತಃ ಇಂಧನ ಖಾತೆಯನ್ನು ಹೊಂದಿರುವುದರಿಂದ ಅನುಕೂಲವಾಗುತ್ತದೆ.

ಅಧ್ಯಕ್ಷರು :- ತುರ್ತಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಮುಂದಿನ ವಾರ ಅಥವಾ ಮರು ವಾರದಲ್ಲಿ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ.

ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳು

90 (620) ಶ್ರೀ ಚೆನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ವಿವಿಧ ಸಣ್ಣ ನೀರಾವರಿ ಯೋಜನೆಗಳಡಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಎಷ್ಟು ಹಣ ಮಂಜೂರಾಗಿದೆ ; ಎಷ್ಟು ಹಣ ಖರ್ಚು ಮಾಡಲಾಗಿದೆ ;

ಆ) ಪೂರ್ಣಗೊಂಡಿರುವ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು ; ಪ್ರತಿ ಕಾಮಗಾರಿಯ ಹೆಸರು ಅಂದಾಜು ಮೊತ್ತ, ಖರ್ಚಾದ ಹಣ ಮುಂತಾದ ಸಂಪೂರ್ಣ ಮಾಹಿತಿಯನ್ನು ನೀಡುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) 1999-2000 ರಿಂದ 2001-02ರ ವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿಯಲ್ಲಿ ಒಟ್ಟು 17 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಕಾಮಗಾರಿಗಳಿಗೆ ರೂ. 360.21 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಮಾರ್ಚ್ 2002ರ ಅಂತ್ಯಕ್ಕೆ ರೂ. 352.86 ಲಕ್ಷಗಳು ವೆಚ್ಚವಾಗಿರುತ್ತದೆ.

ಆ) 1999-2000 ರಿಂದ 2001-02ನೇ ಸಾಲಿನವರೆಗೆ ತೆಗೆದುಕೊಂಡ ಒಟ್ಟು 17 ಕಾಮಗಾರಿಗಳಲ್ಲಿ 6 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ 11 ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು ರೂ. 393.62 ಲಕ್ಷ ಅನುದಾನ ಬೇಕಾಗಿರುತ್ತದೆ. ಕಾಮಗಾರಿಯ ಹೆಸರು ಹಾಗೂ ವಿವಿಧ ಹಂತದ ಹಾಗೂ ಬೇಕಾಗಿರುವ ಅನುದಾನದ ವಿವರಗಳನ್ನು ಪ್ರತ್ಯೇಕ ಅನುಬಂಧದಲ್ಲಿ ನೀಡಲಾಗಿದೆ.

ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 1999-2000ನೇ ಸಾಲಿನಲ್ಲಿ ಮಂಜೂರಾದ ಕಾಮಾಗಾರಿಗಳ, ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರಗಳು

(ಲಕ್ಷ ರೂ. ಗಳಲ್ಲಿ)

ಕ್ರ. ಸಂ.	ಕಾಮಗಾರಿ ವಿವರ	ಲೆಕ್ಕ ಶೀರ್ಷಿಕೆ	ಅಂದಾಜು ಮೊತ್ತ	ಮಂಜೂರಾದ ಅನುದಾನ	3:2000 ವರೆಗಿನ ವೆಚ್ಚ	ಕಾಮಗಾರಿ ಪೂರ್ಣ ಗೊಂಡಿದಲ್ಲಿ, ವಿವರ	ಕಾಮಗಾರಿ ಅಪೂರ್ಣ ಗೊಂಡಿದಲ್ಲಿ ಬೇಕಾದ ಅನುದಾನ	ಷರಾ
1.	ಎತ್ತಿನಮನೆ ಗುಲಗಂಜಿ ಗುಡ್ಡದ ಬಳಿ ಹೊಸಕೆರೆ ನಿರ್ಮಾಣ	4702 ವಿಶ್ವ ಬ್ಯಾಂಕ್	1303:2000	174.00	12619	ಪ್ರಗತಿಯಲ್ಲಿದೆ	ಮುಂದುವರೆದ ಕಾಮಗಾರಿ	
2.	ಕೋರಮಂಗಲ ಬಳಿ ಶ್ರೀರಂಗ ಅಣೆ ನಿರ್ಮಾಣ		41.50	3.10	3.40	-,,-	-,,-	
3.	ಹುಲಿಕಲ್ ಹಿರೇಕೆರೆ ಅಭಿವೃದ್ಧಿ		3.00	0.15	0.39	-,,-	-,,-	
4.	ತಾವರೆಕೆರೆ ಕೆರೆಯ ಅಭಿವೃದ್ಧಿ		6.00	0.15	4.00	-,,-	-,,-	
5.	ಕಣ್ಣೂರು ಕೆರೆ ಅಭಿವೃದ್ಧಿ		3.00	0.90	0.26	-,,-	-,,-	
	ಒಟ್ಟು ಮೊಬಲಗು			178.30	134.33			

ಅನುಬಂಧ-2

ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2000-2001ನೇ ಸಾಲಿನಲ್ಲಿ ಮಂಜೂರಾದ ಕಾಮಾಗಾರಿಗಳು, ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರಗಳು

(ಲಕ್ಷ ರೂ. ಗಳಲ್ಲಿ)

ಕ್ರ. ಸಂ.	ಕಾಮಗಾರಿಯ ವಿವರ	ಲೆಕ್ಕ ಶೀರ್ಷಿಕೆ	ಅಂದಾಜು ಮೊತ್ತ	ಮಂಜೂರಾದ ಅನುದಾನ	31.3.01ರ ವರೆಗಿನ ವೆಚ್ಚ	ಕಾಮಗಾರಿ ಪೂರ್ಣ ಗೊಂಡಿದಲ್ಲಿ ವಿವರ	ಕಾಮಗಾರಿ ಅಪೂರ್ಣ ಗೊಂಡಿದಲ್ಲಿ ಬೇಕಾದ ಅನುದಾನ	ಷರಾ
1	2	3	4	5	6	7	8	9
1.	ಎತ್ತಿನಮನೆ ಗುಲಗಂಜಿ ಗುಡ್ಡದ ಬಳಿ ಹೊಸಕೆರೆ ನಿರ್ಮಾಣ	4702 ವಿಶ್ವ ಬ್ಯಾಂಕ್	1303 2155	29.00	112.37	ಪ್ರಗತಿಯಲ್ಲಿದೆ	ಮುಂದುವರೆದ ಕಾಮಗಾರಿಗಳು	
2.	ಕೋರಮಂಗಲ ಬಳಿ ಶ್ರೀರಂಗ ಅಣೆ ನಿರ್ಮಾಣ	4702 ಹೊಸಕೆರೆ	41.50	3.81	3.94	-,,-	-,,-	
3.	ಹುಲಿಕಲ್ ಹಿರೇಕೆರೆ ಅಭಿವೃದ್ಧಿ	4702 ಕೆರೆಕಲ್ಯಾಣ	3.00	0.5	1.30	ಕಾಮಗಾರಿ ಮುಗಿಯುವ ಹಂತದಲ್ಲಿದೆ	-,,-	

1	2	3	4	5	6	7	8	9
4.	ತಾವರೆಕೆರೆ ಕೆರೆಯನ್ನು ಅಭಿವೃದ್ಧಿ ಪಡಿಸುವುದು	4702 ಕೆರೆ ಕಲ್ಯಾಣ	6.00	0.50	0.62	ಕಾಮಗಾರಿ ಮುಗಿಯುವ ಹಂತದಲ್ಲಿದೆ	ಮುಂದುವರೆದ ಕಾಮಗಾರಿಗಳು	
5.	ಮಾಗಡಿ ಗೌರಮ್ಮನ ಕೆರೆ ಅಭಿವೃದ್ಧಿ	4702 ಕೆರೆ ಕಲ್ಯಾಣ	5.00	1.00	0.20	ಪ್ರಗತಿಯಲ್ಲಿದೆ	-,,-	
6.	ಕಣ್ಣೂರು ಕೆರೆ ಅಭಿವೃದ್ಧಿ	4702 ಕೆರೆ ಕಲ್ಯಾಣ	3.00	1.00	2.21	ಕಾಮಗಾರಿ ಪೂರ್ಣ ಗೊಂಡಿದೆ	-,,-	
7.	ಕಲ್ಯಾ ಕೆರೆ ಅಭಿವೃದ್ಧಿ	4702 ಕೆರೆ ಕಲ್ಯಾಣ	5.00	1.00	2.69	-,,-	-,,-	
8.	ಭಗಿನಿಗೆರೆ ಕೆರೆ ಅಭಿವೃದ್ಧಿ	4702 ಕೆರೆ ಕಲ್ಯಾಣ	10.00	3.00	0.46	ಪ್ರಗತಿಯಲ್ಲಿದೆ	-,,-	
9.	ತಿಪ್ಪಸಂದ್ರ ಊರಮುಂದಿನ ಕೆರೆ ಹೂಳೆತ್ತುವುದು	4702 ಹೂಳೆತ್ತುವುದು	5.00	1.50	2.98	-,,-	-,,-	
10.	ನಾರಸಂದ್ರ ಕೆರೆ ಹೂಳೆತ್ತುವುದು	4702 ಹೂಳೆತ್ತುವುದು	10.00	3.00	4.40	ಕಾಮಗಾರಿ ಪೂರ್ಣಗೊಂಡಿದೆ	-,,-	
11.	ಹೆಬ್ಬಳಲು ಕೆರೆ ಅಧುನೀಕರಣ	4702 ಅಧುನೀಕರಣ	15.00	2.70	3.83	ಪ್ರಗತಿಯಲ್ಲಿದೆ	-,,-	
		ಒಟ್ಟು ಮೊಬಲಗು		47.01	135.00			

ಅನುಬಂಧ-3

ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2001-02ನೇ ಸಾಲಿನಲ್ಲಿ ಮಂಜೂರಾದ ಕಾಮಾಗಾರಿಗಳು ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರಗಳು

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ	ಮಂಜೂರಾದ ಅನುದಾನ	ಪ್ರಸಕ್ತ ಸಾಲಿನ ವೆಚ್ಚ	3:02ರ ವರೆಗಿನ ಒಟ್ಟು ವೆಚ್ಚ	ಕಾಮಗಾರಿ ಪೂರ್ಣ ಗೊಂಡಿದಲ್ಲಿ ವಿವರ	ಕಾಮಗಾರಿ ಅಪೂರ್ಣ ಗೊಂಡಿದಲ್ಲಿ ಬೇಕಾದ ಅನುದಾನ	ಷರಾ
1	2	3	4	5	6	7	8	9
1.	ಎತ್ತಿನಮನೆ ಗುಲಗಂಜಿ ಗುಡ್ಡದ ಬಳಿ ಹೊಸಕೆರೆ ನಿರ್ಮಾಣ	1303:2 155	110.00	63.48	2097.50	ಕಾಮಗಾರಿ ಪ್ರಗತಿ ಯಲ್ಲಿದೆ	325.00 ಲಕ್ಷ ಅನುದಾನಗಳು ಬೇಕಾಗಿದೆ	ಕಾಮಗಾರಿಯನ್ನು ಕೆ.ಎಸ್.ಪಿ.ಸಿ. ಯವರಿಗೆ ಅಂತಿಮಗೊಳಿಸಿ ಮರುಟೆಂಡರ್ ಕರೆಯಲಾಗಿದೆ.
2.	ಕೋರಮಂಗಲ ಬಳಿ ಶ್ರೀರಂಗ ಆಣೆ ನಿರ್ಮಾಣ	41.50	13.50	1.98	6.93	-,,-	32.23	

1	2	3	4	5	6	7	8	9
3.	ಹುಲಿಕಲ್ ಹಿರೇಕೆರೆಯಬ ಅಭಿವೃದ್ಧಿ	3.00	0.20	0.41	1.71	ಕಾಮಗಾರಿ ಪ್ರಗತಿ ಯಲ್ಲಿದೆ	0.90	
4.	ತಾವರೆಕೆರೆ ಕೆರೆಯ ಅಭಿವೃದ್ಧಿ	6.00	0.50	0.55	5.18	-,,-	0.90	
5.	ಮಾಗಡಿ ಗೌರಮ್ಮನ ಕೆರೆ ಅಭಿವೃದ್ಧಿ	5.00	0.50	0.39	0.39	-,,-	0.41	3.63 ಬಾಕಿ ಪಾವತಿಸಬೇಕಾಗಿದೆ.
6.	ಕಣ್ಣೂರು ಕೆರೆ ಅಭಿವೃದ್ಧಿ	3.00	0.20	0.86	3.95	ಪೂರ್ಣ ಗೊಂಡಿದೆ	-	
7.	ಕಲ್ಯಾ ಕೆರೆ ಅಭಿವೃದ್ಧಿ	5.00	0.50	1.92	4.62	-,,-	-	
8.	ಬಗಿನಿ ಕೆರೆ ಅಭಿವೃದ್ಧಿ	10.00	1.00	4.63	4.73	ಪ್ರಗತಿಯಲ್ಲಿದೆ	4.91	
9.	ಬಿಸ್ಕೂರು ಕೆರೆ ಅಭಿವೃದ್ಧಿ	5.00	0.50	0.31	0.38	-,,-	5.00	

1	2	3	4	5	6	7	8	9
10.	ದೊಡ್ಡಮುದಿಗೆರೆ ಕೆರೆ ಅಭಿವೃದ್ಧಿ	5.00	0.50	0.27	0.35	-,,-	5.00	
11.	ಮಾಯಸಂದ್ರಕೆರೆ ಅಭಿವೃದ್ಧಿ	5.00	1.50	0.29	0.42	-,,-	5.00	
12.	ತಪ್ಪಸಂದ್ರ ಊರಮುಂದಿನ ಕೆರೆ ಹೂಳೆತ್ತುವುದು	5.00	0.50	0.03	3.02	-,,-	2.00	
13.	ನಾರಸಂದ್ರ ಕೆರೆ ಹೂಳೆತ್ತುವುದು	10.00	0.50	5.50	9.94	ಪೂರ್ಣ ಗೊಂಡಿದೆ	-	
14.	ಹೆಬ್ಬಳಲು ಕೆರೆ ಅಧುನೀಕರಣ	15.00	5.00	2.96	6.79	ಪೂರ್ಣ ಗೊಳ್ಳವ ಹಂತದಲ್ಲಿದೆ	8.27	
			134.90	83.53	2145.97		393.62	

ಶ್ರೀ ಸಿ. ಚೆನ್ನಿಗಪ್ಪ :- ಮಾನ್ಯ ಅಧ್ಯಕ್ಷರೆ, ಇವತ್ತು ಮಾಗಡಿ ತಾಲ್ಲೂಕ್‌ನಲ್ಲಿ 2,145.97 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿದ್ದಾರೆ. ಅದರಲ್ಲಿ ನಾಗಸಂದ್ರ ಕೆರೆ ಹೂಳೆತ್ತುವ ಕಾರ್ಯಕ್ರಮದಲ್ಲಿ ಇವತ್ತು ಜೆಸಿಬಿಯು 29 ಗಂಟೆಗಳ ಕಾಲ ಕೆಲಸ ಮಾಡಿದೆ. ಅಷ್ಟು ಕೆಲಸವನ್ನು ಮಾಡಿ ಸುಮಾರು 9,94,000-00 ರೂಪಾಯಿಗಳ ಪೂರ್ಣ ಬಿಲ್ಲನ್ನು ಮಾಡಿದ್ದಾರೆ. ಎಷ್ಟು ಕೆರೆಗಳ ಹೂಳೆತ್ತುವುದಕ್ಕೆ ಇವತ್ತು ಸರ್ಕಾರದವರು ಆದೇಶವನ್ನು ಮಾಡಿದ್ದಾರೆ ? ಅದರಲ್ಲಿ ಕೆರೆಗಳ ಹೂಳನ್ನು ಸರಿಯಾಗಿ ಎತ್ತದೆ, ಸಮರ್ಪಕವಾಗಿ ಕೆಲಸವನ್ನು ಕಂಪ್ಲೀಟಾಗಿ ಮುಗಿಸದೆ ಅವರು ಫ್ರಾಡ್ ಬಿಲ್ಲುಗಳನ್ನು ಮಾಡುವಂತಹ ವಿಚಾರದಲ್ಲಿ ಅನೇಕ ಕಡೆ ಇವತ್ತು ನೆಲಮಂಗಲ, ಕೊರಟಗೆರೆ, ಮಾಗಡಿ ತಾಲ್ಲೂಕುಗಳಲ್ಲಿ ಅನೇಕ ಕೆರೆಗಳಲ್ಲಿ ಆ ರೀತಿಯಾಗಿ ಮಾಡಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರೇ ಸ್ವತಃ ಇದರ ಬಗ್ಗೆ ರಿವ್ಯೂ ಮಾಡದೇ ಇದ್ದರೆ ಈ ರಾಜ್ಯದ ಹಣದಲ್ಲಿ ರೈತರಿಗೋಸ್ಕರ ಕೆರೆ ಹೂಳೆತ್ತುವುದಕ್ಕೆ ಕಾರ್ಯಕ್ರಮವೇನಿದೆ ಅದರಿಂದಾಗಿ ಸಂಪೂರ್ಣವಾಗಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಲ್ಲಿ ಇಂಜಿನಿಯರ್‌ಗಳು ಶಾಮೀಲಾಗಿ ಕಂಟ್ರಾಕ್ಟರ್‌ಗಳ ಮುಖಾಂತರ ಕೇವಲ 29 ಗಂಟೆಗಳಲ್ಲಿ 9,94,000-00 ರೂಪಾಯಿಗಳ ಬಿಲ್ಲನ್ನು ತೆಗೆದುಕೊಂಡಿದ್ದಾರೆ. ಅಷ್ಟೇ ಕೆಲಸವನ್ನು ಮುಗಿಸಿ ಸರ್ಕಾರಕ್ಕೆ ಮೋಸ ಮಾಡಿದ್ದಾರೆ. ದಯಮಾಡಿ ಮಾನ್ಯ ಸಚಿವರು ಇದರ ಬಗೆ ಗಮನಹರಿಸಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಮಾನ್ಯ ಚೆನ್ನಿಗಪ್ಪನವರು ನನಗೆ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟರೆ ಅದರ ಬಗ್ಗೆ ಎನ್‌ಕ್ವೆರಿ ಮಾಡಿಸುತ್ತೇನೆ. ನಿಜವಾಗಿಯೂ ಏನು ಪರಿಸ್ಥಿತಿ ಇದೆ ಎಂದು ತಿಳಿದುಕೊಂಡು ಅವರ ಮೇಲೆ ಕ್ರಮ ಜರುಗಿಸುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ :- ಮಾನ್ಯ ಮಂತ್ರಿಗಳ ಅದರ ಬಗ್ಗೆ ಎನ್‌ಕ್ವೆರಿ ಮಾಡಿಸಿದರೆ ಅದರಲ್ಲಿ ಎಷ್ಟು ಸಂಪೂರ್ಣವಾಗಿ ಕೆಲಸ ಮಾಡಿಸಿದ್ದಾರೆಂಬುದು ಅರ್ಥವಾಗುತ್ತದೆ. ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರು ಮಾಗಡಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕಾಗಿ ಎಷ್ಟೆಷ್ಟು ಹಣ ಖರ್ಚಾಗಿದೆ, ನಾವು ಪ್ರತಿಯೊಂದು ಕೆರೆಗೂ ಎಷ್ಟು ಹಣ ಖರ್ಚಾಗಿದೆ ಮತ್ತು ಎಸ್ಟಿಮೇಟ್‌ನ ಪ್ರಕಾರ ಎಷ್ಟು ಹಣ ಖರ್ಚಾಗಿದೆ, ಅದರಲ್ಲಿ ಎಷ್ಟು ಹಣ ಪ್ರಾವಿಜನ್ ಇದೆ ಎನ್ನತಕ್ಕಂತಹ ಸಂಪೂರ್ಣವಾದ ಮಾಹಿತಿಯನ್ನು ಅವರಿಗೆ ಕೊಟ್ಟಿದ್ದೇವೆ. ಆದರೆ ಅವರಿಗೆ ಒಂದು ಸಂಶಯವಿದೆ, ಮಾಗಡಿ ಮತಕ್ಷೇತ್ರದಲ್ಲಿ ಪರ್ಟಿಕ್ಯುಲರ್ ಕೆಲಸದಲ್ಲಿ ಅವ್ಯವಹಾರವಾಗಿದೆ ಎಂದು ಅವರು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಸಂಬಂಧಪಟ್ಟ ಚೀಫ್ ಇಂಜಿನಿಯರ್‌ರವರಿಗೆ ಕಳುಹಿಸಿ ಅದರ ಬಗ್ಗೆ ಎನ್‌ಕ್ವೊಯರಿ ಮಾಡಿ ಅದು ಸರಿಯೋ ಅಥವಾ ತಪ್ಪೋ ಎಂಬುದನ್ನೂ ನಾನು ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು :- ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.